# ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

ರಾಜ್ಯ ಕೇಂದ್ರ ಕಾರ್ಯಾಲಯ, #39, ಶಾಂತಿಗೃಹ, ಅರಮನೆ ರಸ್ತೆ, ಬೆಂಗಳೂರು – 560 001

ದೂ:+91-80-2226 0017;+91-80-2226 7470;+91-80-2226 1047 ಮಿಂಚಂಚೆ: info@bsgkarnataka.org ಅಂತರ್ಜಾಲ: www.bsgkarnataka.org


ಸಂಖ್ಯೆ:SHQ/ORG.1/Letter/2026-27/1190 ದಿನಾಂಕ:03.10.2026

**ಜಿಲ್ಲಾ ಕಾರ್ಯದರ್ಶಿ**
ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್
ಜಿಲ್ಲಾ ಸಂಸ್ಥೆ, ಕರ್ನಾಟಕ

ಮಾನ್ಯರೆ,

ವಿಷಯ:- **"ಕಸವನ್ನು ಕಸವಾಗಿರಿಸದೇ ರಸವನ್ನಾಗಿಸುವ ಕರೆಗಂಟೆ"** – "Time up- Time up from Thrashing the Trash, it is time to Transform the Trash" ಪ್ಲಾಸ್ಟಿಕ್ ಬಳಕೆ ಕಡಿಮೆ ಮಾಡುವುದು ಮತ್ತು ಪ್ಲಾಸ್ಟಿಕ್‌ಗಳನ್ನು ಸ್ವಚ್ಛಗೊಳಿಸಿ, ಮರುಬಳಕೆ ಮಾಡುವ ವಿಶೇಷ ಯೋಜನೆಯನ್ನು ಹಮ್ಮಿಕೊಳ್ಳುವ ಕುರಿತು.

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ರಾಜ್ಯ ಸಂಸ್ಥೆಯು ಸುಸ್ಥಿರ ಅಭಿವೃದ್ಧಿ ಯೋಜನೆಗಳ ಅಡಿಯಲ್ಲಿ ಸಾಕಷ್ಟು ಕಾರ್ಯಚಟುವಟಿಕೆಗಳನ್ನು ನಡೆಸುತ್ತಿದ್ದೇವೆ. ಅದರಂತೆ ಡಾ॥ ರೀತು ರವಿ ಗಂಜಿಗಟ್ಟಿರವರ ಮಾರ್ಗದರ್ಶನದಲ್ಲಿ "Time up- Time up from Thrashing the Trash, it is time to Transform the Trash (**ಕಸವನ್ನು ಕಸವಾಗಿರಿಸದೇ ರಸವನ್ನಾಗಿಸುವ ಕರೆಗಂಟೆ**)" ಎಂಬ ಉತ್ತಮ ಯೋಜನೆಯನ್ನು ಹೊಂದಿ, ಪ್ಲಾಸ್ಟಿಕ್ ಬಳಕೆ ಕಡಿಮೆ ಮಾಡಲು ಮತ್ತು ಅದರ ಮರುಬಳಕೆ ಮಾಡಲು ವಿಶೇಷ "Time up" ಯೋಜನೆ ಹಮ್ಮಿಕೊಳ್ಳಲು ಕೋರಲಾಗಿದೆ.

ಈ ಯೋಜನೆಯನ್ನು ಎಲ್ಲಾ ಶಾಲಾ-ಕಾಲೇಜುಗಳಲ್ಲಿ ಪರಿಸರ ಸಂರಕ್ಷಣೆಗಾಗಿ ಎಲ್ಲಾ ವಿದ್ಯಾರ್ಥಿಗಳಿಗೆ ಪ್ಲಾಸ್ಟಿಕ್‌ಗಳ ಮರುಬಳಕೆ ಬಗ್ಗೆ ಸ್ಪಷ್ಟ ಮಾಹಿತಿ ನೀಡಿ, ಅವರವರ ಮನೆಗಳಲ್ಲಿ ಹೋಟಲ್‌ನಿಂದ ತಂದಿರುವ ಅಥವಾ ಇನ್ನಿತರೆ ಮರುಬಳಸುವ ಪ್ಲಾಸ್ಟಿಕ್ ಬಾಕ್ಸ್‌ಗಳನ್ನು ಉಪಯೋಗಿಸಿದ ನಂತರ, ಬಾಕ್ಸ್‌ಗಳನ್ನು ತೊಳೆದು ಸ್ವಚ್ಛಗೊಳಿಸಿ, ಒಣಗಿಸಿ, ಗನ್ನಿ ಬ್ಯಾಗ್‌ಗಳಲ್ಲಿ ಸಂಗ್ರಹಿಸಿಟ್ಟು, ಅವುಗಳನ್ನು ಶಾಲಾ-ಕಾಲೇಜುಗಳಿಗೆ ಅಥವಾ ವಾರಕ್ಕೊಮ್ಮೆ ಮನೆ ಹತ್ತಿರ ಬರುವ ಕಸ ಸಂಗ್ರಹಣೆ ಮಾಡುವ ವ್ಯಾನ್‌ಗಳಿಗೆ ನೀಡುವುದು. ಶಾಲಾ/ಕಾಲೇಜುಗಳಿಗೆ ನೀಡುವ ಶಾಲಾ/ಕಾಲೇಜುಗಳವರು ವಿದ್ಯಾರ್ಥಿಗಳಿಂದ ನಿಗದಿತ ದಿನಾಂಕಗಳಂದು ಸಂಗ್ರಹಿಸಿ, ಬಾಕ್ಸ್‌ಗಳನ್ನು ವಾರಕ್ಕೊಮ್ಮೆ ಆ ಕಸ ಸಂಗ್ರಹಿಸುವವರಿಗೆ ನೀಡುವಂತೆ ಈ ಮೂಲಕ ಕೋರಲಾಗಿದೆ.

ವಿದ್ಯಾರ್ಥಿಗಳಲ್ಲಿ ಒಳ್ಳೆಯ ಕೆಲಸ ಮಾಡಿಸುವಲ್ಲಿಯ ಈ ಅತ್ಯುತ್ತಮ ಹವ್ಯಾಸವನ್ನು ಬೆಳೆಸಲು, ತಾವು ಮತ್ತು ತಮ್ಮ ಸ್ಥಳೀಯ ಹಾಗೂ ಜಿಲ್ಲಾ ಪದಾಧಿಕಾರಿಗಳಿಗೆ ಈ ಸ್ವಚ್ಛಗೊಳಿಸಿದ ಪ್ಲಾಸ್ಟಿಕ್ ಮರುಬಳಕೆ ಯೋಜನೆಯನ್ನು ಮಕ್ಕಳು ಕಾರ್ಯಗತಗೊಳಿಸುವಲ್ಲಿ ದಳನಾಯಕರುಗಳು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮತ್ತು ಪ್ರೋತ್ಸಾಹವನ್ನು ನೀಡಲು ವಿನಂತಿಸಿದೆ. **ಈ ಬಗ್ಗೆಯ ಭಾರತ್ ಸ್ಕೌಟ್ಸ್-ಗೈಡ್ಸ್‌ನಿಂದ ಪ್ರಕಟಿಸಲ್ಪಟ್ಟ ಸ್ಪಷ್ಟ, ಸಂಕ್ಷಿಪ್ತ ಮಾಹಿತಿಯ ಪ್ರತಿಯನ್ನು ಹಿಂದಿನ ಪುಟದಲ್ಲಿ ಮುದ್ರಿಸಿದೆ.** ಈ ಯೋಜನೆಯ ಉತ್ತಮ ಫಲಿತಾಂಶವನ್ನು ಪಡೆಯುವಲ್ಲಿ ನಾವೂ, ನೀವೆಲ್ಲರೂ ಕೈಜೋಡಿಸಿದಲ್ಲಿ ಈ ಕಸ ವಿಂಗಡಣೆ ಮಾಡುವ ಪೌರಕಾರ್ಮಿಕರಿಗೆ ಬಹಳಷ್ಟು ಸಹಕಾರಿ ಆಗುವುದಲ್ಲದೆ, ಪರಿಸರ ಸಂರಕ್ಷಣೆಗೆ ಮಹತ್ತರ ಕೊಡಿಗೆ ಆಗುವುದನ್ನು ಈ ಮೂಲಕ ತಿಳಿಸುತ್ತಾ, ಕೈಗೊಂಡ ಕ್ರಮಗಳ ಬಗ್ಗೆ ಆಗಿಂದಾಗ್ಯೆ ವರದಿ ಮಾಡುತ್ತಿರಲು ತಿಳಿಸಿದೆ.

ಸ್ಕೌಟ್ಸ್-ಗೈಡ್ಸ್ ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

**(ಕೆ. ಗಂಗಪ್ಪ ಗೌಡ)**
ರಾಜ್ಯ ಕಾರ್ಯದರ್ಶಿ

ಪ್ರತಿಯನ್ನು: ಎಎಸ್‌ಒಸಿ/ಡಿಒ/ಡಿಒಟಿ/ಎಸ್‌ಜಿವಿ/ಎಸ್‌ಜಿಎಗಳ ಸೂಕ್ತ ಕ್ರಮಕ್ಕಾಗಿ

# ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ
# The Bharat Scouts and Guides Karnataka

## "ಕಸವನ್ನು ಕಸವಾಗಿರಿಸದೇ ರಸವನ್ನಾಗಿಸುವ ಕರೆಗಂಟೆ" – "Time up- Time up from Thrashing the Trash, it is time to Transform the Trash"
















ಪರಿಸರ ಸಂರಕ್ಷಣೆಯಲ್ಲಿ "ಟೈಮ್ ಅಫ್" ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಪ್ರಾಂಶುಪಾಲರು, ದಳ ನಾಯಕರು ಹಾಗೂ ಎಲ್ಲಾ ಹಂತದ ಪದಾಧಿಕಾರಿಗಳು ಸಕ್ರಿಯವಾಗಿ ಸಹಕರಿಸೋಣ.

**ನಮ್ಮ ಸಣ್ಣ ಪ್ರಯತ್ನ – ಪರಿಸರದ ದೊಡ್ಡ ಸಂರಕ್ಷಣೆ. ಬನ್ನಿ, "ಟೈಮ್ ಅಫ್" ಯೋಜನೆಯ ಯಶಸ್ಸಿಗೆ ಎಲ್ಲರೂ ಕೈಜೋಡಿಸೋಣ.**



**ಡಾ.ಪಿ.ಜಿ.ಆರ್.ಸಿಂಧ್ಯ**
ಮಾಜಿ ಸಚಿವರು ಕರ್ನಾಟಕ ಸರ್ಕಾರ
ರಾಜ್ಯ ಮುಖ್ಯ ಆಯುಕ್ತರು, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

www.https://bsgkarnataka.in